ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 48 ]
Total No. of Questions : 48 ]

**C**

**CCE PR**
**NSR & NSPR**

Question Paper Serial No. **100**

ಇಲ್ಲಿಂದ ಕತ್ತರಿಸಿ

**ಸಂಕೇತ ಸಂಖ್ಯೆ : 85-K**

**Code No. : 85-K**

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Repeater / NSR & NSPR)**

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

ದಿನಾಂಕ : 30. 06. 2022 ] [ Date : 30. 06. 2022

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

### *ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :*

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 48 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

Tear here

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : 8 × 1 = 8**

1. ಮೊದಲನೇ ಆಂಗ್ಲೋ-ಮರಾಠ ಯುದ್ಧದ ಬಳಿಕ ಪೇಶ್ವೆಯಾದವನು

   (A) ನಾರಾಯಣರಾವ್

   (B) ಎರಡನೇ ಮಾಧವರಾವ್

   (C) ನಾನಾ ಫಡ್ನವೀಸ್

   (D) ರಘುನಾಥ ರಾವ್

2. 'ಸಂಪತ್ತಿನ ಸೋರುವಿಕೆ ಸಿದ್ಧಾಂತ'ವನ್ನು ವಿವರಿಸಿದವರು

   (A) ದಾದಾಬಾಯಿ ನವರೋಜಿ

   (B) ಮಹಾತ್ಮ ಗಾಂಧೀಜಿ

   (C) ಎ.ಓ. ಹ್ಯೂಮ್

   (D) ಬಾಲಗಂಗಾಧರ ತಿಲಕ್

3. ಅಲಿಪ್ತ ನೀತಿಯನ್ನು ತನ್ನ ವಿದೇಶಾಂಗ ನೀತಿಯಲ್ಲಿ ಅಳವಡಿಸಿಕೊಂಡ ರಾಷ್ಟ್ರ

(A) ಅಮೆರಿಕಾ

(B) ರಷ್ಯಾ

(C) ಚೀನಾ

(D) ಭಾರತ

4. ಅಣ್ಣಾಮಲೈ ವನ್ಯಜೀವಿಧಾಮವು ಇರುವ ರಾಜ್ಯ

(A) ಕರ್ನಾಟಕ

(B) ಕೇರಳ

(C) ತಮಿಳುನಾಡು

(D) ತೆಲಂಗಾಣ

5. ಒಂದು ವರ್ಷದ ಅವಧಿಯಲ್ಲಿ, ದೇಶದಲ್ಲಿ ಉತ್ಪಾದಿಸಿದ ಎಲ್ಲಾ ಸರಕು–ಸೇವೆಗಳ ಒಟ್ಟು ಮೌಲ್ಯ

   (A) ತಲಾ ವರಮಾನ

   (B) ಅಭಿವೃದ್ಧಿ

   (C) ರಾಷ್ಟ್ರೀಯ ವರಮಾನ

   (D) ಮಾನವ ಅಭಿವೃದ್ಧಿ ಸೂಚ್ಯಂಕ

6. ಭಾರತದಲ್ಲಿ ಗ್ರಾಹಕ ಸಂರಕ್ಷಣಾ ಕಾಯ್ದೆ ಜಾರಿಗೆ ಬಂದ ವರ್ಷ

   (A) 1962

   (B) 1968

   (C) 1976

   (D) 1986

7. ಇದು ಒಂದು ಪ್ರಮುಖ ಮಹಿಳಾ ಚಳವಳಿಯಾಗಿದೆ

(A) ಮದ್ಯಪಾನ ನಿಷೇಧ ಚಳವಳಿ

(B) ಅಸ್ಪೃಶ್ಯತೆ ಆಚರಣೆ ವಿರೋಧಿ ಚಳವಳಿ

(C) ಕಾರ್ಮಿಕ ಚಳವಳಿ

(D) ರೈತ ಚಳವಳಿ

8. ಸಂಭಾವನೆ ರಹಿತ ದುಡಿಮೆಗೆ ಒಂದು ಉತ್ತಮ ಉದಾಹರಣೆ

(A) ಬೀದಿ ಬದಿಯ ವ್ಯಾಪಾರ

(B) ಆತ್ಮ ಸಂತೋಷಕ್ಕಾಗಿ ಚಿತ್ರ ಬಿಡಿಸುವುದು

(C) ಕೈಗಾರಿಕೆಗಳಲ್ಲಿ ದುಡಿಮೆ

(D) ಶಾಲೆಗಳಲ್ಲಿ ಶಿಕ್ಷಕರ ದುಡಿಮೆ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 8 × 1 = 8**

9. ವಿಶ್ವಗ್ರಾಹಕ ಆಂದೋಲನ ಚರಿತ್ರೆಯಲ್ಲಿ ಮಾರ್ಚ್ 15, 1962 ಏಕೆ ಒಂದು ಮಹತ್ವದ ದಿನವಾಗಿದೆ ?

10. ಉಷ್ಣವಲಯದ ಎಲೆ ಉದುರುವ ಕಾಡುಗಳನ್ನು ಮಾನ್ಸೂನ್ ಕಾಡುಗಳು ಎಂದು ಏಕೆ ಕರೆಯುತ್ತಾರೆ ?

11. ಚಿಪ್ಕೋ ಚಳವಳಿಯ ಪ್ರಮುಖ ಪರಿಣಾಮವೇನು ?

12. ಬೇಸಿಗೆಯಲ್ಲಿ ಭಾರತದ ಉಷ್ಣಾಂಶವು ಹೆಚ್ಚಾಗಿರಲು ಕಾರಣವೇನು ?

13. ಸಹಾಯಕ ಸೈನ್ಯಪದ್ಧತಿಯನ್ನು ಜಾರಿಗೆ ತಂದವರು ಯಾರು ?

14. ಎರಡನೇ ಆಂಗ್ಲೋ-ಮೈಸೂರು ಯುದ್ಧವನ್ನು ಕೊನೆಗಾಣಿಸಿದ ಒಪ್ಪಂದ ಯಾವುದು ?

15. 1962 ರಲ್ಲಿ ಭಾರತದ ಮೇಲೆ ಆಕ್ರಮಣ ಮಾಡಿದ ನೆರೆಯ ರಾಷ್ಟ್ರ ಯಾವುದು ?

16. 'ಭಾರತದ ನೈಜ ಅಭಿವೃದ್ಧಿಯೆಂದರೆ ಅದರ ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು ಯಾರು ?

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**18 × 2 = 36**

17. ಬಕ್ಸಾರ್ ಕದನದ ಪರಿಣಾಮಗಳನ್ನು ತಿಳಿಸಿ.

18. 1961 ರಲ್ಲಿ ಪೋರ್ಚುಗೀಸರಿಂದ ಗೋವಾವನ್ನು ಹೇಗೆ ವಿಮುಕ್ತಿಗೊಳಿಸಲಾಯಿತು ?

19. ಭಾರತದ ವಿದೇಶಾಂಗ ನೀತಿಯ ಮೇಲೆ ಯಾವ ಅಂಶಗಳು ಪ್ರಭಾವ ಬೀರಿವೆ ?

**ಅಥವಾ**

ದ್ವಿತೀಯ ಮಹಾಯುದ್ಧದ ಬಳಿಕ ಎದುರಾದ ಪ್ರಮುಖ ಸಮಸ್ಯೆಗಳಾವುವು ?

20. ಅಸಂಘಟಿತ ವಲಯದ ದುಡಿಮೆಗಾರರ ಸವಾಲುಗಳನ್ನು ಪಟ್ಟಿ ಮಾಡಿ.

**ಅಥವಾ**

ಪ್ರಮುಖ ಪರಿಸರ ಚಳವಳಿಗಳನ್ನು ಪಟ್ಟಿ ಮಾಡಿ.

21. ಭಾರತದ ಪ್ರಮುಖ ಪ್ರಾಕೃತಿಕ ವಿಭಾಗಗಳಾವುವು ?

22. ಮಣ್ಣಿನ ಸವೆತಕ್ಕೆ ಕಾರಣಗಳೇನು ?

23. ಆರ್ಥಿಕ ಅಭಿವೃದ್ಧಿಯ ಉದ್ದೇಶಗಳನ್ನು ತಿಳಿಸಿ.

24. ಬ್ಯಾಂಕ್ ಖಾತೆಯ ವಿಧಗಳಾವುವು ?

25. ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದ ಫಲಿತಾಂಶಗಳಾವುವು ?

26. ಆನಿಬೆಸೆಂಟರ ಸುಧಾರಣೆಗಳು ಯಾವುವು ?

27. ಭಾರತವು ಸ್ವಾತಂತ್ರ್ಯ ಗಳಿಸಿದ ಸಮಯದಲ್ಲಿ ಎದುರಿಸಿದ ಸಮಸ್ಯೆಗಳಾವುವು ?

28. ಭಾರತದ ವಿದೇಶಾಂಗ ನೀತಿಯ ಮೂಲಭೂತ ಅಂಶಗಳಾವುವು ?

29. ಪ್ರಮುಖ ನಿಶ್ಶಸ್ತ್ರೀಕರಣ ಒಪ್ಪಂದಗಳನ್ನು ಹೆಸರಿಸಿ.

30. ಸಾಮಾಜಿಕ ಸ್ತರವಿನ್ಯಾಸದ ಲಕ್ಷಣಗಳಾವುವು ?

31. ಭಾರತದ ಕರಾವಳಿ ಮೈದಾನಗಳ ಆರ್ಥಿಕ ಪ್ರಾಮುಖ್ಯತೆಯನ್ನು ತಿಳಿಸಿ.

32. ಭಾರತದ ಪ್ರಮುಖ ವಾಯುಗುಣದ ಋತುಕಾಲಗಳಾವುವು ?

33. ಅನಾಭಿವೃದ್ಧಿ ರಾಷ್ಟ್ರಗಳ ಲಕ್ಷಣಗಳಾವುವು ?

34. ಬ್ಯಾಂಕಿನ ವಿಧಗಳನ್ನು ಪಟ್ಟಿ ಮಾಡಿ.

**IV. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**9 × 3 = 27**

35. ಬ್ರಿಟಿಷ್ ಶಿಕ್ಷಣವು ಭಾರತೀಯರ ಮೇಲೆ ಹೇಗೆ ಪ್ರಭಾವ ಬೀರಿತು ?

**ಅಥವಾ**

ಸಂಗೊಳ್ಳಿ ರಾಯಣ್ಣನು ಬ್ರಿಟಿಷರ ವಿರುದ್ಧ ಹೇಗೆ ಹೋರಾಡಿದನು ?

36. ಆರ್ಯ ಸಮಾಜದ ಉದ್ದೇಶಗಳಾವುವು ?

37. 1857 ರ ದಂಗೆಯು ಹಲವಾರು ಕಾರಣಗಳಿಂದ ವಿಫಲವಾಯಿತು. ವಿವರಿಸಿ.

38. ರಷ್ಯಾದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.

39. ಸ್ವತಂತ್ರ ಭಾರತವು ಅಸ್ಪೃಶ್ಯತೆಯ ನಿವಾರಣೆಗಾಗಿ ತೆಗೆದುಕೊಂಡಿರುವ ಕ್ರಮಗಳಾವುವು ?

40. ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು ?

**ಅಥವಾ**

ಒಂದು ದೇಶದ ಅಭಿವೃದ್ಧಿಯಲ್ಲಿ ಸಾರಿಗೆಯ ಮಹತ್ವವನ್ನು ವಿವರಿಸಿ.

41. ಪ್ರವಾಹಗಳಿಂದುಂಟಾಗುವ ಪರಿಣಾಮಗಳಾವುವು ?

42. ಉತ್ಪಾದನಾಂಗಗಳ ಪೂರೈಕೆಯಲ್ಲಿ ಬದಲಾವಣೆಗಳುಂಟಾಗಲು ಕಾರಣಗಳೇನು ?

**ಅಥವಾ**

ಪಂಚಾಯತ್‌ರಾಜ್ ಸಂಸ್ಥೆಯ ಪ್ರಮುಖ ಲಕ್ಷಣಗಳಾವುವು ?

43. ಬ್ಯಾಂಕುಗಳ ಪ್ರಮುಖ ಕಾರ್ಯಗಳನ್ನು ತಿಳಿಸಿ.

**ಅಥವಾ**

ಉದ್ಯಮಗಾರಿಕೆಯ ಗುಣಲಕ್ಷಣಗಳನ್ನು ತಿಳಿಸಿ.

**V. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**4 × 4 = 16**

44. ಭಾರತದ ರಾಷ್ಟ್ರೀಯ ಹೋರಾಟದಲ್ಲಿ ಸುಭಾಷ್‌ಚಂದ್ರ ಬೋಸ್‌ರವರ ಪಾತ್ರವನ್ನು ವಿವರಿಸಿ.

45. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ವಿವಿಧ ಬುಡಕಟ್ಟು ವರ್ಗಗಳ ಬಂಡಾಯಗಳನ್ನು ವಿವರಿಸಿ.

**ಅಥವಾ**

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರಗಾಮಿಗಳ ಪಾತ್ರವನ್ನು ವಿವರಿಸಿ.

46. ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳಾವುವು ?

47. ಭಾರತದಲ್ಲಿ ರೂಢಿಯಲ್ಲಿರುವ ವಿವಿಧ ಕೃಷಿ ವಿಧಾನಗಳನ್ನು ಪಟ್ಟಿ ಮಾಡಿ.

**VI. 48. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ : 1 + 4 = 5**

a) $82\frac{1}{2}^{o}$ ಪೂರ್ವ ರೇಖಾಂಶ

b) ನರ್ಮದಾ ನದಿ

c) ನವ ಮಂಗಳೂರು ಬಂದರು

d) ಭಾಕ್ರ–ನಂಗಲ್ ಯೋಜನೆ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 48 ರ ಬದಲಿಗೆ)***

ವಿವಿಧೋದ್ದೇಶ ನದಿಕಣಿವೆ ಯೋಜನೆಗಳ ಮುಖ್ಯ ಉದ್ದೇಶಗಳನ್ನು ತಿಳಿಸಿ. **5**